## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಟಿ.ರವಿ ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನಾ ಪತ್ರಕ್ಕೆ ಉತ್ತರ

**ವಿಷಯ:** ಕನ್ನಡಪ್ರಭ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ "ದಶ ದಿಕ್ಕುಗಳಿಂದ ಕರ್ನಾಟಕಕ್ಕೆ ಡ್ರಗ್ಸ್ ಗಂಡಾಂತರ" ಎಂಬ ಶಿರೋನಾಮೆಯಡಿ ಅಂತರರಾಷ್ಟ್ರೀಯ ಡ್ರಗ್ಸ್ ಮಾಫಿಯಾಗೆ ಈಗ ಕರ್ನಾಟಕ ಬೃಹತ್ ಮಾರುಕಟ್ಟೆ ಎಂದು ಪ್ರಕಟವಾಗಿರುವ ವರದಿಯ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಲು ಅವಕಾಶ ನೀಡಬೇಕೆಂದು ಕೋರುತ್ತೇನೆ.

ವಿಶ್ವಮಟ್ಟದಲ್ಲಿ ಮಾಹಿತಿ ತಂತ್ರಜ್ಞಾನ ವಿಸ್ತರಣೆಗೆ ಭೂಮಿಕೆ ಕಲ್ಪಿಸಿ ಖ್ಯಾತಿ ಪಡೆದಿರುವ ಕರುನಾಡು ಈಗ ಅಂತರಾಷ್ಟ್ರೀಯ ಡ್ರಗ್ಸ್ ಮಾಫಿಯಾಗೆ ಬೃಹತ್ ಮಾರುಕಟ್ಟೆಯಾಗಿ ರೂಪುಗೊಳ್ಳುತ್ತಿರುವ ಆತಂಕ ಶುರುವಾಗಿದೆ. ರಾಜ್ಯಕ್ಕೆ 10ಕ್ಕೂ ಹೆಚ್ಚು ದೇಶಗಳಿಂದ ಡ್ರಗ್ಸ್ ಪ್ರವಾಹವೇ ಬರುತ್ತಿದೆ. ಒಂದೆಡೆ ಮಾದಕ ವಸ್ತು ನಶೇ ಜಾಲ ಶರವೇಗದಲ್ಲಿ ಯುವ ಸಮೂಹವನ್ನು ಆವರಿಸಿಕೊಳ್ಳುತ್ತಿದ್ದರೆ, ಮತ್ತೊಂದೆಡೆ ಭದ್ರತಾ ಕಣ್ಗಾವಲು ತಪ್ಪಿಸಿ ಕೋಟ್ಯಂತರ ರೂಪಾಯಿ ಮೌಲ್ಯದ ಡ್ರಗ್ಸ್ ರಾಜ್ಯದ ಒಳನುಸುಳುತ್ತಿದೆ. ಈ ಬೆಳವಣಿಗೆ ರಾಜ್ಯದಲ್ಲಿ ಮಾದಕ ವಸ್ತು ಮಾರಾಟ ಜಾಲವು ಸಂಘಟಿತ ಉದ್ಯಮವಾಗಿ ಬೆಳೆಯುತ್ತಿರುವುದನ್ನು ತೋರುತ್ತಿದೆ. ರಾಜ್ಯ ಪೊಲೀಸ್ ಇಲಾಖೆಯ ಅಧಿಕೃತ ಅಂಕಿ-ಅಂಶಗಳ ಪ್ರಕಾರ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ 15,678 ಡ್ರಗ್ಸ್ ಪ್ರಕರಣಗಳು ದಾಖಲಾಗಿದ್ದು, 19,197 ಜನ ಬಂಧಿತರಾಗಿದ್ದಾರೆ. ಈ ಆರೋಪಿಗಳಿಂದ 19.308 ಟನ್ ಗಾಂಜಾ ಹಾಗೂ 1.244 ಟನ್ ಸಿಂಥೆಟಿಕ್ ಡ್ರಗ್ಸ್ ಜಪ್ತಿಯಾಗಿದೆ. 211 ವಿದೇಶಿ ಪ್ರಜೆಗಳನ್ನು ಈ ಸಂಬಂಧ ಬಂಧಿಸಲಾಗಿದೆ. 2025 ರಲ್ಲೇ ಬೆಂಗಳೂರಿನಲ್ಲಿ 162 ಕೋಟಿ ರೂ ಮೌಲ್ಯದ ಡ್ರಗ್ಸ್ ಜಪ್ತಿಯಾಗಿರುವುದು ಈ ಕರಾಳ ಜಾಲದ ಆಳವನ್ನು ಸೂಚಿಸುತ್ತಿದೆ. ಗರಿಷ್ಠ ಭದ್ರತಾ ವ್ಯವಸ್ಥೆ ಇರುವ ರಾಜ್ಯದ ಕಾರಾಗೃಹಗಳಲ್ಲಿ ಖೈದಿಗಳಿಗೂ ಡ್ರಗ್ಸ್ ಪೂರೈಕೆಯಾಗುತ್ತಿರುವುದು ನಾಚಿಕೆಗೇಡಿನ ಸಂಗತಿ. ಇದು ರಾಜ್ಯ ಸರ್ಕಾರದ ಭದ್ರತಾ ವ್ಯವಸ್ಥೆಯಲ್ಲಿನ ಲೋಪವಾಗಿದೆ. ಕಾರಾಗೃಹಗಳಲ್ಲಿ ಡ್ರಗ್ಸ್ ಯಾವ ರೀತಿ ಹರಡಿದೆ ಎಂದರೆ ಕೈದಿಗಳಿಗೆ ಡ್ರಗ್ಸ್ ಪೂರೈಕೆಗೆ ಕಡಿವಾಣ ಹಾಕಿದ ಕಾರಣ ಇತ್ತೀಚೆಗೆ ಕಾರವಾರ ಜೈಲಿನಲ್ಲಿ ಕೈದಿಗಳಿಂದ ಜೈಲರ್ ಮತ್ತು ಸಿಬ್ಬಂದಿಗಳ ಮೇಲೆಯೇ ಹಲ್ಲೆ ನಡೆದಿದೆ.

ಡ್ರಗ್ಸ್ ಮಾರಾಟಕ್ಕೆ ಸಹಕರಿಸಿದ ಆರೋಪದ ಮೇಲೆ ಹಲವು ಪೊಲೀಸರು ಅಮಾನತುಗೊಂಡಿರುವುದನ್ನು ಗಮನಿಸಿದರೆ ಕೆಲ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳು ಡ್ರಗ್ಸ್ ಮಾಫಿಯಾ ಜೊತೆ ಷಾಮೀಲಾಗಿರುವುದು ಸ್ಪಷ್ಟವಾಗಿದೆ. ಮೆಕ್ಸಿಕೋವನ್ನು ಮಾದಕ ವಸ್ತುಗಳ ಸ್ವರ್ಗ ಎನ್ನುತ್ತಾರೆ. ಆದರೆ, ರಾಜ್ಯ ಅದರಲ್ಲೂ ಬೆಂಗಳೂರು ಅದನ್ನೂ ಮೀರಿಸುತ್ತಿದೆ. ಪರಿಸ್ಥಿತಿ ಗಂಭೀರವಾಗಿದ್ದು, ಸರ್ಕಾರ ಡ್ರಗ್ಸ್ ಮುಕ್ತ ಕರ್ನಾಟಕ ಎಂದು ಬರೀ ಘೋಷಣೆ ಕೂಗಿದರೆ ಸಾಲದು, ಮುಂದೆ ಆಗುವ ಅನಾಹುತವನ್ನು ತಪ್ಪಿಸಲು ಮತ್ತು ಡ್ರಗ್ಸ್ ಜಾಲದಿಂದ ಯುವಜನತೆಯನ್ನು ರಕ್ಷಿಸಲು ರಾಜ್ಯದಲ್ಲಿ ಡ್ರಗ್ಸ್ ಮಾಫಿಯಾವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಬೇಕೆಂದು ಸರ್ಕಾರವನ್ನು ಆಗ್ರಹಿಸುತ್ತೇನೆ.

**ಉತ್ತರ:**

ರಾಜ್ಯದಲ್ಲಿ ಮಾದಕ ದ್ರವ್ಯಗಳ ಹಾವಳಿಯನ್ನು ಎದುರಿಸಲು ಹಾಗೂ ತಡೆಗಟ್ಟಲು ಮಾದಕ ದ್ರವ್ಯ ವಿರೋಧಿ ಕಾರ್ಯಪಡೆ (ಎ.ಎನ್.ಟಿ.ಎಫ್) ಯನ್ನು ಎಡಿಜಿಪಿ ಹುದ್ದೆಯ ನೇತೃತ್ವದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 141 ಪಿಓಪಿ 2024, ದಿನಾಂಕ: 01/08/2025 ರಂದು ಸ್ಥಾಪಿಸಲಾಗಿದೆ. ಅದರಂತೆ ಕಾರ್ಯಪಡೆಯು ಕಾರ್ಯನಿರ್ವಹಿಸುತ್ತಿದೆ.

ರಾಜ್ಯದಲ್ಲಿ ಮಾದಕ ವಸ್ತುಗಳ ಹಾವಳಿಯನ್ನು ತಡೆಗಟ್ಟಲು ಸರ್ಕಾರವು ತೆಗೆದುಕೊಂಡ ಕ್ರಮಗಳು ಈ ಕೆಳಕಂಡಂತಿದೆ:-

- ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರ ಕಛೇರಿ ಆದೇಶ ಸಂಖ್ಯೆ: 1047 ರಲ್ಲಿ ಮಾದಕ ವಸ್ತು ಮತ್ತು ಅದರ ವ್ಯಸನದ ವಿರುದ್ಧ ಜಾಗೃತಿ ಅಭಿಯಾನಗಳನ್ನು ನಡೆಸಲು ಎಲ್ಲಾ ಘಟಕಗಳಿಗೆ ಸೂಚಿಸಲಾಗಿರುತ್ತದೆ.

- ಎನ್.ಡಿ.ಪಿ.ಎಸ್. ಕಾಯ್ದೆಯಡಿಯಲ್ಲಿ ದಾಖಲಾದ ಪ್ರಕರಣಗಳ ತನಿಖೆಯ ಸಂಬಂಧ ಸ್ಥಾಯಿ ಆದೇಶ ಸಂಖ್ಯೆ: 1048 ರಲ್ಲಿ ಎಲ್ಲಾ ತನಿಖಾಧಿಕಾರಿಗಳಿಗೆ ಅಗತ್ಯ ಕ್ರಮವಹಿಸುವಂತೆ ಸೂಚಿಸಲಾಗಿರುತ್ತದೆ.
- ಮಾದಕ ವಸ್ತು ಸೇವನೆ ಮತ್ತು ಮಾರಾಟಕ್ಕೆ ಸಂಬಂಧಿಸಿದಂತೆ ಪೊಲೀಸ್ ಠಾಣಾ ಮಟ್ಟದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸ್ಥಾಯಿ ಆದೇಶ ಸಂಖ್ಯೆ:1051ರಲ್ಲಿ ನಿರ್ದೇಶಗಳನ್ನು ನೀಡಲಾಗಿದೆ.
- ಮಾದಕ ದ್ರವ್ಯ ಮುಕ್ತ ಕರ್ನಾಟಕ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಸನ್ಮಿತ್ರ ಉಪಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವ ಬಗ್ಗೆ ಸ್ಥಾಯಿ ಆದೇಶ ಸಂಖ್ಯೆ: 1052 ರಲ್ಲಿ ಮಾರ್ಗದರ್ಶನ ನೀಡಲಾಗಿದೆ.
- NDPS ಪ್ರಕರಣಗಳಲ್ಲಿನ ಆರೋಪಿಗಳ ಮಾಹಿತಿಯನ್ನು ಪೊಲೀಸ್ ಐಟಿ ತಂತ್ರಾಂಶ-National Integrated Database on Arrested Narco Offenders - NIDAAN ಪೋರ್ಟಲ್‌ನಲ್ಲಿ ದಾಖಲಿಸಿ ನಿರ್ವಹಿಸಲಾಗುತ್ತಿದೆ. ಆರೋಪಿಗಳ ದತ್ತಾಂಶ ವಿಶ್ಲೇಷಣೆ ಮಾಡಿ ಆರೋಪಿಗಳ ಚಲನವಲನಗಳ ಮೇಲೆ ನಿಗಾವಹಿಸಲಾಗಿದೆ.
- ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿNCORD (Narcotics Co- ordination) ಸಮಿತಿ ರಚನೆಗೊಂಡಿರುತ್ತದೆ. NDPS ಕಾಯ್ದೆ ಜಾರಿಗೊಳಿಸುವ ಸಂಬಂಧ ಇತರೆ ಇಲಾಖೆಯ ಸಮನ್ವಯದೊಂದಿಗೆ ಕ್ರಮ ಕೈಗೊಳ್ಳಲಾಗುತ್ತಿದೆ.
- ಎನ್.ಡಿ.ಪಿ.ಎಸ್ ಪ್ರಕರಣಗಳಲ್ಲಿ ಭಾಗಿಯಾಗುವ ವಿದೇಶಿ ಪ್ರಜೆಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. ಭಾಗಿಯಾಗುವ ಆರೋಪಿಗಳನ್ನು ವಿದೇಶಿ ಪ್ರಜೆಗಳ ಕಾಯ್ದೆ ಅಡಿಯಲ್ಲಿ ಗಡಿಪಾರು ಪ್ರಕ್ರಿಯೆ ಕೈಗೊಳ್ಳಲು ಕ್ರಮ ಜರುಗಿಸಲಾಗುತ್ತಿದೆ.
- ರಾಜ್ಯದ ಯುವಕರಲ್ಲಿ ಮಾದಕ ವಸ್ತು ಬಳಕೆ ಹೆಚ್ಚುತ್ತಿರುವ ಬಗ್ಗೆ ಡ್ರಗ್ಸ್ ಹಾವಳಿಯನ್ನು ಪೂರ್ಣವಾಗಿ ತಡೆಗಟ್ಟಲು ಶಾಲಾ-ಕಾಲೇಜುಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿರುತ್ತದೆ.
- ಪೊಲೀಸ್ ಠಾಣೆಗಳಲ್ಲಿ ನಿಯಮಿತವಾಗಿ ಜಾಗೃತ ಕಾರ್ಯಕ್ರಮಗಳನ್ನು ಶಾಲಾ-ಕಾಲೇಜುಗಳಲ್ಲಿ ಗಾಂಜಾ ಸೇವನೆಯಿಂದ ಆಗುವ ದುಷ್ಪರಿಣಾಮಗಳ, ಗಾಂಜಾ ಬೆಳೆಯನ್ನು ಬೆಳೆಯುವುದು ಮತ್ತು ಮಾರಾಟ ಮಾಡುವುದು ಕಾನೂನಾತ್ಮಕ ಅಪರಾಧವಾಗಿರುತ್ತದೆ ಎಂಬ ಬಗ್ಗೆ ಹಾಗೂ ಅದರಿಂದಾಗುವ ಶಿಕ್ಷೆ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಮಾಡಲಾಗಿರುತ್ತದೆ.
- ಮಾದಕ ದ್ರವ್ಯಗಳ ಅಕ್ರಮ ಸಾಗಾಣಿಕೆ ಮತ್ತು ಮಾದಕದ್ರವ್ಯ ಜಾಲ ಕುರಿತು ಸ್ಥಳೀಯ ಬಾತ್ಮೀದಾರರು, ಅಪರಾಧ ವಿಭಾಗದ ಸಿಬ್ಬಂದಿಗಳು ಹಾಗೂ ಬೀಟ್ ಸಿಬ್ಬಂದಿಗಳಿಂದ ಮಾಹಿತಿ ಕಲೆ ಹಾಕಲಾಗುತ್ತಿದೆ. ಪೊಲೀಸ್ ಠಾಣೆಗಳಲ್ಲಿ ಮಾದಕ ದ್ರವ್ಯಗಳ ಅಕ್ರಮ ಸಾಗಾಣಿಕೆ ಬಗ್ಗೆ ವಿಶೇಷವಾಗಿ ಮಾಹಿತಿಯನ್ನು ಸಂಗ್ರಹಿಸಿ ಕ್ರಮಕೈಗೊಳ್ಳಲಾಗುತ್ತಿದೆ.
- ಮಾದಕ ವಸ್ತು ಮಾರಾಟ ಮತ್ತು ಸೇವನೆ ಮಾಡುವವರ ವಿರುದ್ಧ ದೂರು ನೀಡಲು ಟೋಲ್ ಫ್ರೀ ಸಂಖ್ಯೆ: 1933 ಯೋಜನೆಯನ್ನು ಪ್ರಾರಂಭಿಸಿರುವ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲಾಗಿದೆ.
- ನಗರ ಮಟ್ಟದಲ್ಲಿ "Zero Narcotics" ಘೋಷಣೆ, ಶಾಲಾ-ಕಾಲೇಜುಗಳು, PG/Hostels, ಮಾಲ್‌ಗಳ ಸುತ್ತಮುತ್ತ ನಿರಂತರ ನಿಗಾವಣೆ Special Narcotics Squad ನಿಯೋಜಿಸಲಾಗಿದೆ.
- ಪ್ರತಿ ತಿಂಗಳು ಶಾಲಾ-ಕಾಲೇಜುಗಳು ಮತ್ತು ಸಾರ್ವಜನಿಕ ಸ್ಥಳಗಳಿಗೆ ಭೇಟಿ ನೀಡಿ ಮಾದಕ ವಸ್ತುಗಳ ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಗುತ್ತಿದೆ.
- ಸಂಶಯಾಸ್ಪದ ಹೈಸೆಕ್ಯುರಿಟಿ ಸ್ಥಳಗಳಲ್ಲಿ ಬಿಗಿ ನಿಗಾವಣೆ ಇಡಲಾಗಿದೆ. ಪಾರ್ಸಲ್ ಸರ್ವೀಸ್, ಕೋರಿಯರ್ ಸೆಂಟರ್, ರೆಸಾರ್ಟ್/ಫಾರ್ಮ್ ಹೌಸ್‌ಗಳಿಗೆ Surprise Inspections (ದಿಢೀರ್ ಭೇಟಿ) ಕೈಗೊಂಡು ನಗರ ಹೊರವಲಯಗಳಲ್ಲಿ ಡ್ರಗ್ಸ್ ಪಾರ್ಟಿಗಳನ್ನು ತಡೆಗಟ್ಟುವ ಬಗ್ಗೆ ವಿಶೇಷ ಪೆಟ್ರೋಲಿಂಗ್ ನಡೆಸಲಾಗಿರುತ್ತದೆ.

➢ ಪ್ರತಿ ಮಾಹೆಯಲ್ಲಿ ಜಿಲ್ಲಾ ಮಟ್ಟದ NCORD ಸಮಿತಿ ಸಭೆಗಳನ್ನು ನಡೆಸಲು ಎಲ್ಲಾ ಘಟಕಾಧಿಕಾರಿಗಳಿಗೆ ತಿಳಿಸಲಾಗಿರುತ್ತದೆ.
➢ ಪ್ರತಿ ವರ್ಷ ಜೂನ್ 26 ರಂದು "ಮಾದಕ ವಸ್ತುಗಳ ನಿಗ್ರಹ ದಿನ"ವನ್ನು ಆಚರಣೆ ಮಾಡಿ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗುತ್ತಿದೆ.
➢ ಮಾದಕ ವಸ್ತು ಮಾರಾಟ ಉತ್ಪಾದನೆ ಬಗ್ಗೆ ಅನುಮಾನಾಸ್ಪದ ವ್ಯಕ್ತಿಗಳು ಕಂಡುಬಂದಲ್ಲಿ ಎನ್.ಡಿ.ಪಿ.ಎಸ್. ಕಾಯ್ದೆ-1985ರಡಿ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲು ವಿ.ಸಿ. ಮೂಲಕವು ಸಹ ಎಲ್ಲಾ ಘಟಕಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ.

ಕಳೆದ ಎರಡು ವರ್ಷಗಳಲ್ಲಿ ಡ್ರಗ್ಸ್ ದಂಧೆಕೋರರ ಜೊತೆ ಶಾಮೀಲಾಗಿ ಆಯಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಹಾವಳಿಯನ್ನು ತಡೆಯಲು ವಿಫಲರಾದ 26 ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗಿರುತ್ತದೆ. ಠಾಣಾವಾರು ಸಿಬ್ಬಂದಿಗಳ ವಿವರವನ್ನು **ಅನುಬಂಧ -1** ರಲ್ಲಿ ನೀಡಲಾಗಿದೆ.

ರಾಜ್ಯದಲ್ಲಿ 2023 ರಿಂದ 2025 ರವರೆಗೆ ಎನ್.ಡಿ.ಪಿ.ಎಸ್. ಕಾಯ್ದೆ-1985ರಡಿ ದಾಖಲಾದ ಪ್ರಕರಣಗಳ ಸಂಖ್ಯೆ, ವಶಪಡಿಸಿಕೊಂಡ ಮಾದಕ ವಸ್ತುಗಳ ಅಂಕಿ-ಅಂಶ ಹಾಗೂ ವಿದೇಶಿಯರ ಬಂಧನದ ಅಂಕಿ-ಅಂಶಗಳ ವಿವರ ಈ ಕೆಳಕಂಡಂತಿದೆ:-

ಎನ್.ಡಿ.ಪಿ.ಎಸ್. ಕಾಯ್ದೆ-1985 ರಡಿ ದಾಖಲಾದ ಅಂಕಿ-ಅಂಶ

| ವರ್ಷ | ದಾಖಲಾದ ಪ್ರಕರಣಗಳ ಸಂಖ್ಯೆ | ಭಾರತೀಯ ಬಂಧಿತ ಅಪರಾಧಿಗಳ ಸಂಖ್ಯೆ | ವಿದೇಶೀ ಬಂದಿತ ಅಪರಾಧಿಗಳ ಸಂಖ್ಯೆ | ಉತ್ಪಾದಕರ ಸಂಖ್ಯೆ | ಮಾರಾಟ ಗಾರರ ಸಂಖ್ಯೆ | ವ್ಯಸನಿಗಳ ಸಂಖ್ಯೆ |
|---|---|---|---|---|---|---|
| 2023 | 6768 | 9038 | 108 | 97 | 2397 | 5229 |
| 2024 | 4168 | 6395 | 68 | 51 | 1953 | 3818 |
| 2025 | 5930 | 7393 | 58 | 39 | 2008 | 4836 |
| ಒಟ್ಟು | 16866 | 22826 | 234 | 187 | 6358 | 13883 |

2023-2025 ರಲ್ಲಿ ವಶಪಡಿಸಿಕೊಂಡ ಮಾದಕ ವಸ್ತುಗಳ ಮತ್ತು ಮೌಲ್ಯ ಅಂಕಿ-ಅಂಶ

| Year | Ganja Seized in Kgs | Value | Synthetic Drugs Seized in Kgs | Value |
|---|---|---|---|---|
| 2023 | 10613.78 | 57,43,87,010/- | 47.132<br>Syrup Bottle 137<br>Tablet 2630 | 76,08,88,399/- |
| 2024 | 6139.28 | 48,71,01,274/- | 187.302<br>Hashish oil 5ltr<br>Syrup Bottle 993<br>Tablet 8421<br>Cocaine 0.366 | 148,26,47,190/- |
| 2025 | 6073.07 | 77,99,12,094/- | 1272.937<br>Syrup Bottle 293<br>Tablet 16172 | 116,09,81,712/- |
| Total | 22826.13 | 184,14,00,378/- | 1507.371 | 340,45,17,301/- |

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು

ಒಇ 77 ಪಿಎನ್‌ಡಿ 2025 (ಇ)

# ಅನುಬಂಧ-1

| ಕ್ರ. ಸಂ. | ವಲಯ/ಜಿಲ್ಲೆ | ಆಪಾಧಿತ ಪೊಲೀಸ್ ಸಿಬ್ಬಂದಿಯವರ ಹೆಸರು ಮತ್ತು ಹುದ್ದೆ. | ಕರ್ತವ್ಯ ನಿರ್ವಹಿಸುತ್ತಿರುವ ಠಾಣೆಯ ಹೆಸರು | ದೋಷಾರೋಪಣ ವಿವರ | ಶಿಸ್ತು ಕ್ರಮ ಕೈಗೊಂಡಿರುವ ಬಗ್ಗೆ ವಿವರ ಮತ್ತು ಪ್ರಸ್ತುತ ಹಂತ |
|---|---|---|---|---|---|
| **ಪೊಲೀಸ್ ಆಯುಕ್ತರು, ಬೆಂಗಳೂರು ನಗರ** | | | | | |
| 1. | ಡಿಸಿಪಿ., ಪಶ್ಚಿಮ ವಿಭಾಗ | ಶ್ರೀ ಮಂಜಣ್ಣ, ಪಿಐ (ಹಾಲಿ ಅಮಾನತ್ತು) | ಚಾಮರಾಜಪೇಟೆ ಪೊ.ಠಾ (ಲೀನ್ ಬದಲಾವಣೆಯಾಗಿ ಪ್ರಸ್ತುತ ರಾಜ್ಯ ಗುಪ್ತವಾರ್ತೆ) | ಆರ್ ಆರ್ ಪೊಲೀಸ್ ಠಾಣೆ ಮೊ.ಸಂ-264/2025 ಕಲಂ—78 ಬಿಎನ್ಎಸ್ ಪ್ರಕರಣದ ಎ-1 ಆರೋಪಿ ಸಲ್ಮಾನ್ @ ಪಾಪು ಮತ್ತು ಇತರರು ಜೊತೆ ಚಾಮರಾಜಪೇಟೆ ಮತ್ತು ಜೆ ಜೆ ನಗರ ಪೊಲೀಸ್ ಠಾಣೆಯ ಅಧಿಕಾರಿ/ ಸಿಬ್ಬಂದಿಗಳು ನಿರಂತರ ಸಂಪರ್ಕದಲ್ಲಿದ್ದು. ಆರೋಪಿಗಳಿಗೆ ಸಹಕರಿಸುತ್ತಿರುವುದು ತನಿಖೆಯಲ್ಲಿ ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. | ಪೊಲೀಸ್ ಪ್ರಧಾನ ಕಛೇರಿಯ ದೋಷಾರೋಪಣೆ ಸಂಖ್ಯೆ: ಹೆಚ್.ಆರ್.ಎಂ-1(8)/67/ 2025-26, ದಿ:18.10.2025 ರಲ್ಲಿ ಕೆ.ಎಸ್‌ಪಿ (ಡಿಪಿ) ನಿಯಮ-6 & 8 ರಡಿ ದೋಷಾರೋಪಣೆಯನ್ನು ಹೊರಡಿಸಲಾಗಿರುತ್ತದೆ. |
| 2. | | ಕುಮಾರ ವಿ, ಎ.ಎಸ್.ಐ, (ಹಾಲಿ ಅಮಾನತ್ತು) | ಜೆ ಜೆ ನಗರ ಪೊಲೀಸ್ ಠಾಣೆ | | |
| 3. | | ಮಹೇಶಪ್ಪ ಹೆಚ್.ಸಿ-12333, (ಹಾಲಿ ಅಮಾನತ್ತು) | ಜೆ ಜೆ ನಗರ ಪೊಲೀಸ್ ಠಾಣೆ | | |
| 4. | | ಬಸವನಗೌಡ ಮಲಗೌಡ್ರ ಹೆಚ್.ಸಿ-12378, (ಹಾಲಿ ಅಮಾನತ್ತು) | ಜೆ ಜೆ ನಗರ ಪೊಲೀಸ್ ಠಾಣೆ | | |
| 5. | | ಆನಂದ ಅವಾರಿ ಹೆಚ್.ಸಿ-11310, (ಹಾಲಿ ಅಮಾನತ್ತು) | ಜೆ ಜೆ ನಗರ ಪೊಲೀಸ್ ಠಾಣೆ | | |
| 6. | | ಶಿವರಾಜ್ ಎಸ್, ಹೆಚ್.ಸಿ-10138 (ಹಾಲಿ ಅಮಾನತ್ತು) | ಚಾಮರಾಜಪೇಟೆ ಪೊ.ಠಾ | | |
| 7. | | ರಮೇಶ್ ಬಾನಂದ್ , ಹೆಚ್.ಸಿ-10554 (ಹಾಲಿ ಅಮಾನತ್ತು) | ಚಾಮರಾಜಪೇಟೆ ಪೊ.ಠಾ | | |
| 8. | | ಪ್ರಸನ್ನ ಕುಮಾರ್, ಪಿಸಿ-19732, (ಹಾಲಿ ಅಮಾನತ್ತು) | ಚಾಮರಾಜಪೇಟೆ ಪೊ.ಠಾ | | |
| 9. | | ಆನಂದ ಮಡಿವಾಳ, ಪಿಸಿ-19974 (ಹಾಲಿ ಅಮಾನತ್ತು) | ಚಾಮರಾಜಪೇಟೆ ಪೊ.ಠಾ | | |
| 10. | | ಶಂಕರ್ ಬೆಳಗಲಿ , ಪಿಸಿ- | ಚಾಮರಾಜಪೇಟೆ ಪೊ.ಠಾ | | |

| | | | | | |
|---|---|---|---|---|---|
| 10. | | ಶಂಕರ್ ಬೆಳಗಲಿ , ಪಿಸಿ-20233 (ಹಾಲಿ ಅಮಾನತ್ತು) | ಚಾಮರಾಜಪೇಟೆ ಪೊ.ಠಾ | | |
| 11. | | ಮಧುಸೂಧನ್ ಬಿ.ಕೆ, ಹೆಚ್.ಸಿ-11745 (ಹಾಲಿ ಅಮಾನತ್ತು) | ಚಾಮರಾಜಪೇಟೆ ಪೊ.ಠಾ | | |
| 12. | **ಡಿಸಿಪಿ, ಪೂರ್ವ ವಿಭಾಗ** | ಶ್ರೀ ಮುತ್ತುರಾಜ್ – ಪಿಐ | ಈ ಹಿಂದೆ ರಾಮಮೂರ್ತಿನಗರ ಪೊಲೀಸ್ ಠಾಣೆ | ದಿ:28-08-2024 ರಂದು ಬೀಟ್ ಸಿಬ್ಬಂದಿ ಡ್ರಗ್ ಪೆಡ್ಲರ್ ಟೋನಿ @ ಆಂಟೋನಿ ರವರನ್ನು ಹಿಡಿದುಕೊಂಡು ಆತನ ವಶದಲ್ಲಿದ್ದ ನಾಲ್ಕು ಮಾದಕ ಮಾತ್ರೆಗಳು, ಒಂದು ಚಾಕು, 22-23 ಸಾವಿರ ನಗದು ಹಣ, ಮೊಬೈಲ್ ಇತ್ಯಾದಿ ಸಮೇತ ಠಾಣೆಗೆ ಕರೆತಂದು ಹಾಜರುಪಡಿಸಿ ವರದಿ ನೀಡಿದ್ದು ಸದರಿಯವರ ವಿರುದ್ಧ ಯಾವುದೇ ಕ್ರಮ ಜರುಗಿಸದೇ ಬಿಡುಗಡೆ ಮಾಡಿರುವ ಆರೋಪ | ಪೊಲೀಸ್ ಪ್ರಧಾನ ಕಚೇರಿಯ ದೋಷಾರೋಪಣೆ ಸಂಖ್ಯೆ: ಹೆಚ್ಆರ್ ಎಂ-1(8)/90/2024-25 ದಿ:26-03-2025 ರಲ್ಲಿ ಕೆ.ಎಸ್‌ಪಿ (ಡಿಪಿ) ನಿಯಮ-6 & 8 ರಡಿ ದೋಷಾರೋಪಣೆಯನ್ನು ಹೊರಡಿಸಲಾಗಿರುತ್ತದೆ |
| 13. | | ಶ್ರೀ ಫೈರೋಜ್ ಖಾನ್ – ಎಎಸ್ಐ | | | |
| 14. | | ಶ್ರೀ ಮಹೇಶ – ಎಎಸ್ಐ | | | |
| 15. | | ಶ್ರೀ ಮಂಜುನಾಥ – ಹೆಚ್‌ಸಿ 8118 | | | |
| | | **ಪೊಲೀಸ್ ಅಧೀಕ್ಷಕರು, ಬೆಂಗಳೂರು ಜಿಲ್ಲೆ** | | | |
| 16 | ಬೆಂಗಳೂರು ಜಿಲ್ಲೆ | ನಾಗರಾಜ್ ಎಂ, ಸಿಹೆಚ್ ಸಿ-601 | ಹೊಸಕೋಟೆ ಪೊಲೀಸ್ ಠಾಣೆ, | ಇತ್ತೀಚ್ಚೆಗೆ ಬಿ.ಟಿವಿ ಎಂಟರ್ ಟೈನ್‌ಮೆಂಟ್ ಮಾಧ್ಯಮದಲ್ಲಿ ಪ್ರಸಾರವಾದ ಗಾಂಜಾ ಡೀಲಿಂಗ್ ಆಡಿಯೋ ಹಾಗೂ ಗಾಂಜಾ ಮಾರಾಟ ಮಾಡುವ ಪೇಡ್ಲರ್‌ಗಳಾದ ಅಣ್ಣಾ ಯುಸೂಫ್ ಮತ್ತು ಸೈಯದ್ ಸಲೀಂ@ಸಲ್ಲು ಸಲ್ಮಾನ್ ರವರುಗಳೊಂದಿಗೆ ಒಡನಾಟ ಹೊಂದಿರುವುದಾಗಿ ಮಾಧ್ಯಮದಲ್ಲಿ "ಗಾಂಜಾ | ದಿ:10.06.2025 ರಲ್ಲಿ ಅಮಾನತ್ತುಗೊಳಿಸಿ ಆದೇಶಿಸಿದ್ದು, ಅಮಾನತ್ತಿನಲ್ಲಿಯೇ ಮುಂದುವರೆದಿರುತ್ತಾರೆ. |

| | | | | | |
|---|---|---|---|---|---|
| | | | | ದೊರೆ ನಾಗರಾಜ್” ಇತ್ಯಾದಿ ಶೀರ್ಷಿಕೆಯಡಿಯಲ್ಲಿ ಪ್ರಸಾರವಾಗಿರುತ್ತದೆ. ಅದರಂತೆ ಸಿ.ಡಿ.ಆರ್ ದಾಖಲಾತಿಗಳನ್ನು ಪಡೆದು ಪರಿಶೀಲಿಸಲಾಗಿ ನೀವು ಮೇಲ್ಕಂಡ ಆರೋಪಿಗಳೊಂದಿಗೆ ಹಲವಾರು ಬಾರಿ ದೂರವಾಣಿ ಕರೆಗಳನ್ನು ಮೊಬೈಲ್ ನಂಬರ್‌ನಿAದ ಮಾತನಾಡಿರುವುದು ಕಂಡುಬಂದಿರುತ್ತದೆ. | |
| **ಪೊಲೀಸ್ ಅಧೀಕ್ಷಕರು, ಮಂಡ್ಯ ಜಿಲ್ಲೆ** | | | | | |
| **17** | ಎಸ್.ಪಿ., ಮಂಡ್ಯ ಜಿಲ್ಲೆ | ಶ್ರೀ ರಾಜೇಂದ್ರು ಪಿಎಸ್ಐ, | ನಾಗಮಂಗಲ ಗ್ರಾಮಾಂತರ ಪೊಲೀಸ್ ಠಾಣೆ | ಶಿಸ್ತಿನ ಪೊಲೀಸ್ ಇಲಾಖೆಯಲ್ಲಿ ಇದ್ದುಕೊಂಡು ಅಪರಾಧ ಪತ್ತೆ ಮತ್ತು ಅಪರಾಧ ತಡೆ ಉದ್ದೇಶ ಹೊಂದಿರುವ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಸಮಾಜಕ್ಕೆ ಮಾದರಿಯಾಗಬೇಕಾದ ವ್ಯಕ್ತಿಯಾದ ನೀವು ಈ ರೀತಿ ಎನ್‌ಡಿಪಿಎಸ್ ಕಾಯ್ದೆಯ ಪ್ರಕರಣದಲ್ಲಿ ಮಾದಕ ವಸ್ತುಗಳ ಸಾಗಾಣಿಕೆಯ ಆರೋಪಿಗಳ ಜೊತೆ ಸೇರಿ, ಮಾದಕ ವಸ್ತುಗಳ ಸಾಗಾಣಿಕೆಗೆ ಪ್ರಚೋದಿಸುವುದು, ಸಹಾಯ ಮಾಡುವುದು, ಅವರಿಗೆ ನೆರವು ನೀಡಿ ಕರ್ತವ್ಯದಲ್ಲಿ ಅತೀವ ಲೋಪ, ಅಧಿಕಾರ | ಪೊಲೀಸ್ ಉಪ ಮಹಾನಿರೀಕ್ಷಕರು, ದಕ್ಷಿಣ ವಲಯ, ಮೈಸೂರು ರವ ಆದೇಶ ಸಂ. ಸಿಬ್ಬಂದಿ(3)/ಡಿಇ/06/2025-26 ಓಬಿ ಸಂ. 109/2025-26 ದಿ: 14.08.2025 ರಲ್ಲಿ ಪೊಲೀಸ್ ಉಪಾಧೀಕ್ಷಕರು, ನಂಜನಗೂಡು ಉಪ ವಿಭಾಗ, ಮೈಸೂರು ಜಿಲ್ಲೆ ರವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಿ ಇಲಾಖಾ ವಿಚಾರಣೆ ನಡೆಸಲು ಆದೇಶಿಸಲಾಗಿದೆ. ವಿಚಾರಣೆ ಹಂತದಲ್ಲಿರುತ್ತದೆ. |

| | | | | | |
|---|---|---|---|---|---|
| | | | | ಅತೀವ ಲೋಪ, ಅಧಿಕಾರ ದುರ್ಬಳಕೆ, ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವ ಬಗ್ಗೆ. | |
| **18** | ಎಸ್.ಪಿ., ಮಂಡ್ಯ ಜಿಲ್ಲೆ | ಶ್ರೀ ಚನ್ನಬಸವಯ್ಯ, ಎಎಸ್ಐ, ಕೃಷ್ಣ ಟಿ.ಬಿ, ಸಿಹೆಚ್‌ಸಿ-111 ಮತ್ತು ಶ್ರೀಪ್ರಕಾಶ ಎನ್, ಸಿಪಿಸಿ-434 | ನಾಗಮಂಗಲ ಗ್ರಾಮಾಂತರ ಪೊಲೀಸ್ ಠಾಣೆ | ಶಿಸ್ತಿನ ಪೊಲೀಸ್ ಇಲಾಖೆಯಲ್ಲಿ ಇದ್ದುಕೊಂಡು ಅಪರಾಧ ಪತ್ತೆ ಮತ್ತು ಅಪರಾಧ ತಡೆ ಉದ್ದೇಶ ಹೊಂದಿರುವ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಸಮಾಜಕ್ಕೆ ಮಾದರಿಯಾಗಬೇಕಾದ ವ್ಯಕ್ತಿಯಾದ ನೀವು ಈ ರೀತಿ ಎನ್‌ಡಿಪಿಎಸ್ ಕಾಯ್ದೆಯ ಪ್ರಕರಣದಲ್ಲಿ ಮಾದಕ ವಸ್ತುಗಳ ಸಾಗಾಣಿಕೆಯ ಆರೋಪಿಗಳ ಜೊತೆ ಸೇರಿ, ಮಾದಕ ವಸ್ತುಗಳ ಸಾಗಾಣಿಕೆಗೆ ಪ್ರಚೋದಿಸುವುದು, ಸಹಾಯ ಮಾಡುವುದು, ಅವರಿಗೆ ನೆರವು ನೀಡಿ ಕರ್ತವ್ಯದಲ್ಲಿ ಅತೀವ ಲೋಪ, ಅಧಿಕಾರ ದುರ್ಬಳಕೆ, ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವ ಬಗ್ಗೆ. | ಈ ಕಛೇರಿ ಆದೇಶ ಸಂ. ಸಿಬ್ಬಂದಿ(2)/ಡಿಇ/09/2025 ಒಬಿ ಸಂ: 147/2025 ದಿನಾಂಕ: 16-08-2025 ರಂದು ಡಿವೈಎಸ್‌ಪಿ, ಶ್ರೀರಂಗಪಟ್ಟಣ ಉಪ ವಿಭಾಗ ರವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಿ ಇಲಾಖಾ ವಿಚಾರಣೆ ನಡೆಸಲು ಆದೇಶಿಸಲಾಗಿದೆ.<br><br>ವಿಚಾರಣಾಧಿಕಾರಿಗಳು ವಿಚಾರಣೆಯ ದಾಖಲಾತಿಗಳ ಪರಿಶೀಲನೆಯಲ್ಲಿ ಗೊಂದಲವಾಗಿರುವ ಅಂಶಗಳನ್ನು ಪರಿಶೀಲಿಸಿ ಮಾರ್ಗದರ್ಶನ ನೀಡಲು ಕೋರಿರುವ ಸಂಬAಧ ದಿ: 07.11.2025 ರಂದು ವಿಚಾರಣಾಧಿಕಾರಿಗಳಿಗೆ ಸ್ಪಷೀಕರಣ ನೀಡಿ ಕಡತವನ್ನು ಕಳುಹಿಸಲಾಗಿದೆ. |
| **ಪೊಲೀಸ್ ಅಧೀಕ್ಷಕರು, ದಾವಣಗೆರೆ ಜಿಲ್ಲೆ.** | | | | | |
| **19** | ದಾವಸಣಗೆರೆ | ಪುರುಷೋತ್ತಮ ರಾವ್ ಎಂ.ಡಿ., ಸಿಪಿಸಿ-208 | ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆ (ಈ ಹಿಂದೆ ಕೆ.ಟಿ.ಜೆ ನಗರ ಪೊಲೀಸ್ ಠಾಣೆ), ದಾವಣಗೆರೆ ಜಿಲ್ಲೆ. | ಸಾಮಾಜಿಕ ಪಿಡುಗಾದಂತಹ ಗಾಂಜಾ ಮಾರಾಟ ಮಾಡುವವರ ವಿರುದ್ಧ ಸೂಕ್ತ ಕಾನೂನು | ಸದರಿಯವರ ಮೇಲಿನ ಕಾಲಂ: 5 ರಲ್ಲಿನ ಆರೋಪಣೆಯ ಮೇರೆಗೆ ಸೇವೆಯಿಂದ |

| | | | | | |
|---|---|---|---|---|---|
| | | | | ಕ್ರಮ ಜರುಗಿಸಿ, ಇಂತಹ ಕಾನೂನು ಬಾಹಿರ ಚಟುವಟಿಕೆಯನ್ನು ತಡೆಗಟ್ಟ ಬೇಕಾದವರಾಗಿದ್ದು ಕೊಂಡು, ಇಂತಹ ಸಾಮಾಜಿಕ ಪಿಡುಗಾದಂತಹ ಗಾಂಜಾ ಪ್ರಕರಣದಲ್ಲಿನ ಆರೋಪಿತ ರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಆರೋಪಿತ ರೊಂದಿಗೆ ಸೇರಿಕೊಂಡು ಸಾರ್ವಜನಿಕರಿಗೆ ಗಾಂಜಾ ಸೇವನೆ ಮಾಡಿಸಿ, ಅವರಿಗೆ ಹೆದರಿಸಿ, ಗಾಂಜಾ ಸೇವನೆ ಮಾಡಿದ ವ್ಯಕ್ತಿ ಮತ್ತು ವ್ಯಕ್ತಿಯ ಕುಟುಂಬದವರಿಂದ ಹಣ ವಸೂಲಿ ಮಾಡುತ್ತಾ, ಇಲಾಖೆಯ ಗೌರವಕ್ಕೆ ಧಕ್ಕೆಯುಂಟಾಗುವ ರೀತಿಯಲ್ಲಿ ವರ್ತಿಸಿ, ಅತೀವ ದುರ್ನಡತೆ ಮತ್ತು ಅಶಿಸ್ತನ್ನು ಪ್ರದರ್ಶಿಸಿರುವ ಆರೋಪ. | ಅಮಾನತ್ತಿನಲ್ಲಿರಿಸಲಾಗಿದ್ದು, ನಂತರ ಕಾಲಂ: 4 ರಂತೆ ಸದರಿಯವರ ಲೀನ್ ಬದಲಾವಣೆ ಮಾಡಲಾಗಿರುತ್ತದೆ. ಹಾಗೆಯೇ ಕೆ.ಎಸ್.ಪಿ (ಡಿ.ಪಿ) ನಿಯಮ-7 ರಡಿಯಲ್ಲಿ ದೋಷಾರೋಪಣೆಯನ್ನು ಹೊರಡಿಸಿದ್ದು, ಸದರಿ ದೋಷಾರೋಪಣೆ ಪತ್ರಕ್ಕೆ ಅವರು ಸಲ್ಲಿಸಿದ್ದ ಸಮಜಾಯಿಷಿಯನ್ನು ಒಪ್ಪದೇ ಎಚ್ಚರಿಕೆಯನ್ನು ನೀಡಿ, ಸದರಿಯವರ 47 ದಿನಗಳ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಿ ಆದೇಶಿಸಲಾಗಿರುತ್ತದೆ. |
| **ಪೊಲೀಸ್ ಅಧೀಕ್ಷಕರು, ಕೋಲಾರ ಜಿಲ್ಲೆ.** | | | | | |
| **20** | ಕೋಲಾರ ಜಿಲ್ಲೆ | ಶ್ರೀ ಕೆ.ಮುರುಗನ್, ಸಿಹೆಚ್‌ಸಿ 123, | ಮುಳಬಾಗಿಲು ನಗರ ಪೊಲೀಸ್ ಠಾಣೆ | ಶ್ರೀ ಮುರುಗನ್ ಸಿ.ಹೆಚ್.ಸಿ 123 ರವರು ತನ್ನ ಮಗ ದಿಲೀಪ್ @ ಶೈನು ಗಾಂಜಾ ಕೊಳ್ಳಲು ಹಣಕಾಸಿನ ಸಹಾಯ ಮತ್ತು ಗಾಂಜಾ ಸಾಗಾಟ ಮಾಡಲು ವಾಹನದ ವ್ಯವಸ್ಥೆ ಮಾಡಿರುವ ಬಗ್ಗೆ. ಸೇವೆಯಿಂದ ಅಮಾನತ್ತುಗೊಳಿಸಿ ಇಲಾಖಾ ವಿಚಾರಣೆಗೆ ಆದೇಶಿಸಿದ್ದು, | ಕೋಲಾರ ಠಾಣೆ ಮೊ.ಸಂ:57/2024 ಕಲಂ 20(ಬಿ)(2)(ಬಿ)ಎನ್.ಡಿ.ಪಿ.ಎಸ್. ಆಕ್ಟ 1985 ದಿನಾಂಖ: 03.05.2024 ರ ಕ್ರಿಮಿನಲ್ ಪ್ರಕರಣ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ನೀಡಲಾಗಿರುತ್ತದೆ. |

| | | | | | |
|---|---|---|---|---|---|
| | | | | ವಿಚಾರಣಾ ಹಂತದಲ್ಲಿರುತ್ತದೆ. | |
| **ಪೊಲೀಸ್ ಆಯುಕ್ತರು, ಮಂಗಳೂರು ನಗರ.** | | | | | |
| **21** | ಮಂಗಳೂರು ನಗರ (ದ.ಕ ಜಿಲ್ಲೆ | ಶ್ರೀಮತಿ ಪ್ರತಿಭಾ ಕೇ.ಸಿ, ಪಿಎಸ್ಐ | ಮಂಗಳೂರು ದಕ್ಷಿಣ ಪೊಲೀಸ್ ಠಾಣೆ, | ಮಾದಕ ದ್ರವ್ಯ ಸೇವನೆ ಪ್ರಕರಣವನ್ನು ದಾಖಲಿಸುವಲ್ಲಿ ನಿರ್ಲಕ್ಷ್ಯ ವಹಿಸಿದ ಬಗ್ಗೆ. | ಕರ್ನಾಡಕ ರಾಜ್ಯ ಪೊಲೀಸ್ (ಸಿಸ್ತು ನಡವಳಿ) ನಿಯಮಗಳ 1965/89ರ ನಿಯಮ -7ರಂತೆ ಶಿಸ್ತು ಕ್ರಮ ಜರಿಗಿಸಿ ವಾಗ್ದಂಡನೆಯನ್ನು ವಿಧಿಸಲಾಗಿರುತ್ತದೆ. |
| **22** | ಮಂಗಳೂರು ನಗರ (ದ.ಕ ಜಿಲ್ಲೆ | ಶ್ರೀಮತಿ ರೇಖಾ , ಪಿಎಸ್ಐ, | ಮಂಗಳೂರು ದಕ್ಷಿಣ ಪೊಲೀಸ್ ಠಾಣೆ, | ಮಾದಕ ದ್ರವ್ಯ ಸೇವನೆ ಪ್ರಕರಣವನ್ನು ದಾಖಲಿಸುವಲ್ಲಿ ನಿರ್ಲಕ್ಷ್ಯ ವಹಿಸಿದ ಬಗ್ಗೆ. | ಕರ್ನಾಡಕ ರಾಜ್ಯ ಪೊಲೀಸ್ (ಸಿಸ್ತು ನಡವಳಿ) ನಿಯಮಗಳ 1965/89ರ ನಿಯಮ -7ರಂತೆ ಶಿಸ್ತು ಕ್ರಮ ಜರಿಗಿಸಿ ವಾಗ್ದಂಡನೆಯನ್ನು ವಿಧಿಸಲಾಗಿರುತ್ತದೆ. |
| **23** | ಮಂಗಳೂರು ನಗರ (ದ.ಕ ಜಿಲ್ಲೆ | ಶ್ರೀಮತಿ ವನಜಾಕ್ಷಿ, ಪಿಎಸ್ಐ, | ಮಂಗಳೂರು ಉತ್ತರ ಠಾಣೆ, | ಮಾದಕ ದ್ರವ್ಯ ಸೇವನೆ ಪ್ರಕರಣವನ್ನು ದಾಖಲಿಸುವಲ್ಲಿ ನಿರ್ಲಕ್ಷ್ಯ ವಹಿಸಿದ ಬಗ್ಗೆ. | ಕರ್ನಾಡಕ ರಾಜ್ಯ ಪೊಲೀಸ್ (ಸಿಸ್ತು ನಡವಳಿ) ನಿಯಮಗಳ 1965/89ರ ನಿಯಮ -7ರಂತೆ ಶಿಸ್ತು ಕ್ರಮ ಜರಿಗಿಸಿ ವಾಗ್ದಂಡನೆಯನ್ನು ವಿಧಿಸಲಾಗಿರುತ್ತದೆ. |
| **24** | ಮಂಗಳೂರು ನಗರ (ದ.ಕ ಜಿಲ್ಲೆ | ಶ್ರೀಮತಿ ಮಂಜೂಳಾ ಎಲ್ , ಪಿಎಸ್ಐ, | ಮಂಗಳೂರು ಉತ್ತರ ಠಾಣೆ, | ಮಾದಕ ದ್ರವ್ಯ ಸೇವನೆ ಪ್ರಕರಣವನ್ನು ದಾಖಲಿಸುವಲ್ಲಿ ನಿರ್ಲಕ್ಷ್ಯ ವಹಿಸಿರುವ ಬಗ್ಗೆ. | ಕರ್ನಾಡಕ ರಾಜ್ಯ ಪೊಲೀಸ್ (ಸಿಸ್ತು ನಡವಳಿ) ನಿಯಮಗಳ 1965/89ರ ನಿಯಮ -7ರಂತೆ ಶಿಸ್ತು ಕ್ರಮ ಜರಿಗಿಸಿ ವಾಗ್ದಂಡನೆಯನ್ನು ವಿಧಿಸಲಾಗಿರುತ್ತದೆ. |
| **25** | ಮಂಗಳೂರು ನಗರ (ದ.ಕ ಜಿಲ್ಲೆ | ಕು. ಫೈ ಜುನ್ನೀಸಾ, ಪಿಎಸ್ಐ, | ಮಂಗಳೂರು ಉತ್ತರ ಠಾಣೆ, | ಮಾದಕ ದ್ರವ್ಯ ಸೇವನೆ ಪ್ರಕರಣವನ್ನು ದಾಖಲಿಸುವಲ್ಲಿ ನಿರ್ಲಕ್ಷ್ಯ ವಹಿಸಿರುವ ಬಗ್ಗೆ. | ಕರ್ನಾಡಕ ರಾಜ್ಯ ಪೊಲೀಸ್ (ಸಿಸ್ತು ನಡವಳಿ) ನಿಯಮಗಳ 1965/89ರ ನಿಯಮ -7ರಂತೆ ಶಿಸ್ತು ಕ್ರಮ ಜರಿಗಿಸಿ ವಾಗ್ದಂಡನೆಯನ್ನು ವಿಧಿಸಲಾಗಿರುತ್ತದೆ. |

| | | | | | |
|---|---|---|---|---|---|
| 26 | ಮಂಗಳೂರು ನಗರ (ದ.ಕ ಜಿಲ್ಲೆ | ಶ್ರೀ ಶಿವಪ್ಪಗೌಡ, ಪಿಎಸ್ಐ, | ಮಂಗಳೂರು ಉತ್ತರ ಠಾಣೆ, | ಮಾದಕ ದ್ರವ್ಯ ಸೇವನೆ ಪ್ರಕರಣವನ್ನು ದಾಖಲಿಸುವಲ್ಲಿ ನಿರ್ಲಕ್ಷ್ಯ ವಹಿಸಿರುವ ಬಗ್ಗೆ. | ಕರ್ನಾಟಕ ರಾಜ್ಯ ಪೊಲೀಸ್ (ಸಿಸ್ತು ನಡವಳಿ) ನಿಯಮಗಳ 1965/89ರ ನಿಯಮ -7ರಂತೆ ಶಿಸ್ತು ಕ್ರಮ ಜರಿಗಿಸಿ ವಾಗ್ದಂಡನೆಯನ್ನು ವಿಧಿಸಲಾಗಿರುತ್ತದೆ. |